ಎಂ.ವಿ.ಸಿ: 881/2024
ಆರ್ .ಡಬ್ಲ್ಯೂ: 1

ದಿನಾಂಕ 14-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ **2** ನೇ ಎದುರುದಾರರ ಪರ ಶ್ರೀ ಎಂ**.** ಆರ್**.** ವಕೀಲರಿಂದಃ

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ನಾನು ಇಂದು ನ್ಯಾಯಾಲಯಕ್ಕೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಆರ್-1 | ಅಧಿಕಾರ ಪತ್ರ |
| ನಿಆರ್-2 | ವಿಮಾ ಪಾಲಿಸಿ |

ಆದ್ದರಿಂದ ಅರ್ಜಿಯನ್ನು ತಿರಸ್ಕರಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಡಿ.ಬಿ.ಎಸ್.ವಕೀಲರಿಂದಃ**

ಅಪಘಾತವಾದ ಸಮಯದಲ್ಲಿ 1 ನೇ ಎದುರುದಾರರಿಗೆ ಸೇರಿದ ವಾಹನ ಸಂಖ್ಯೆ ಕೆಎ-20-ಇಎಲ್-464 ನೇ ದಕ್ಕೆ ವಿಮಾ ಪಾಲಿಸಿ ಊರ್ಜಿತದಲ್ಲಿತ್ತೆಂದರೆ ಸರಿ. ಪೋಲೀಸಿನವರು ವಾಹನದ ಸವಾರನಿಗೆ ಚಾಲ್ತಿ ಚಾಲನಾ ಪರವಾನಗಿ ಇಲ್ಲವೆಂದು ಅಂತಿಮ ವರದಿ ಸಲ್ಲಿಸಿರುವುದರಿಂದ ನೀವು ನ್ಯಾಯಾಲಯದಲ್ಲಿ ಚಾಲ್ತಿ ಚಾಲನಾ ಪರವಾನಗಿ ಇಲ್ಲವೆಂದು ಸಾಧನೆ ಮಾಡುತ್ತಿದ್ದೇವೆ. ಪೋಲೀಸಿನವರು ಯಾವ ರೀತಿ ತನಿಖೆ ಮಾಡಿದ್ದಾರೆ, ಯಾರನ್ನೆಲ್ಲಾ ವಿಚಾರಣೆ ಮಾಡಿದ್ದಾರೆ, ಯಾವ ದಾಖಲೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಪಡೆಯಲು ಪ್ರಯತ್ನಿಸಿದ್ದಾರೆಂಬ ಬಗ್ಗೆ ನಿಮಗೆ ಖುದ್ದು

ಮಾಹಿತಿ ಇಲ್ಲವೆಂದರೆ ಸರಿ. ನೀವೇನೂ ವಾಹನ ಚಾಲಕನ ಖಾಯಂ ವಿಳಾಸದ ಆಧಾರದ ಮೇಲೆ ಸಂಬಂಧಪಟ್ಟ ಸಾರಿಗೆ ಇಲಾಖೆಯ ಕಛೇರಿಯಿಂದ ಮಾಹಿತಿ ಪಡೆಯಲು ಪ್ರಯತ್ನಿಸಿದ್ದೀರ ಎಂದರೆ ಸಾಕ್ಷಿ ಇಲ್ಲವೆನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ ನೋಟೀಸ್ ಬಂದ ನಂತರ ವಿಮಾ ಪಾಲಿಸಿದಾರನಿಗೆ ವಾಹನದ ಆರ್.ಸಿ. ಚಾಲನಾ ಪರವಾನಗಿ ಮತ್ತು ವಾಹನದ ವಿಮಾ ಪಾಲಿಸಿ ನೀಡುವಂತೆ ಕೋರುವ ಕ್ರಮ ಉಂಟು ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಿಮ್ಮಲ್ಲಿರುವಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಿ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಮಾ ಪಾಲಿಸಿದಾರನಿಗೆ ಕೋರಿಕೆ ನೋಟೀಸ್ ನ್ನು ಸಾಮಾನ್ಯ ಅಂಚೆಯಲ್ಲಿ ನೀಡಿರುತ್ತೇವೆ. ಆ ರೀತಿ ನೋಟೀಸ್ ಜಾರಿ ಮಾಡಿದ್ದ ಪಕ್ಷದಲ್ಲಿ ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅದರ ಬಗ್ಗೆ ತಿಳಿಸುತ್ತೀರಿ ಎಂದರೆ ಸರಿ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಿಮಾ ಪಾಲಿಸಿದಾರನಿಗೆ ನೋಟೀಸ್ ನೀಡಿದ ಬಗ್ಗೆ ತಿಳಿಸಿಲ್ಲ. ವಿಮಾ ಪಾಲಿಸಿದಾರನಿಗೆ ಕೋರಿಕೆ ನೋಟೀಸ್ ನ್ನು ಸಾಮಾನ್ಯ ಅಂಚೆಯ ಮೂಲಕ ನೀಡಿದ್ದೇನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಲನಾ ಪರವಾನಗಿ ಇಲ್ಲದೇ ಇರುವುದು, ಚಾಲನಾ ಪರವಾನಗಿ ಚಾಲ್ತಿಯಲ್ಲಿರದೇ ಇರುವುದು ಹಾಗೂ ಸಂಬಂಧಪಟ್ಟ ವಾಹನಕ್ಕೆ ಚಾಲನಾ ಪರವಾನಗಿ ಊರ್ಜಿತ ಇಲ್ಲದೇ ಇರುವುದು ಬೇರೆ ಬೇರೆ ಎಂದರೆ ಸರಿ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರಿಗೆ ಯಾವ ನಮೂನೆಯ ಚಾಲನಾ ಪರವಾನಗಿ ಇತ್ತೆಂಬ ಬಗ್ಗೆ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲವೆನ್ನುತ್ತಾರೆ. 1 ನೇ ಎದುರುದಾರರ ವಾಹನ ಚಾಲಕನಿಗೆ ಚಾಲನಾ ಪರವಾನಗಿ ಇತ್ತು, ಅದು ಇದ್ದ ಬಗ್ಗೆ ನಿಮಗೆ ಮಾಹಿತಿ ಇತ್ತೆಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ ಹಾಗೆ 1 ನೇ ಎದುರುದಾರರು ಯಾವುದೇ ರೀತಿಯ ವಿಮಾ ಪಾಲಿಸಿಯ ಅಂಶಗಳನ್ನು ಉಲ್ಲಂಘನೆ ಮಾಡಿಲ್ಲವೆಂದರೆ ಸರಿಯಲ್ಲ. ಅರ್ಜಿದಾರರಿಗೆ ವಿಮಾ ಪಾಲಿಸಿ

ಎಂ.ವಿ.ಸಿ: 881/2024
ಆರ್ .ಡಬ್ಲ್ಯೂ: 1

ಚಾಲ್ತಿಯಲ್ಲಿದ್ದುದ್ದರಿಂದ ಅಪಘಾತದ ಪರಿಹಾರ ಕೊಡಲು ಬಾಧ್ಯಸ್ಥರೆಂದರೆ ಸರಿಯಲ್ಲ. ಅರ್ಜಿದಾರರಿಗೆ ನ್ಯಾಯಯುತವಾದ ಪರಿಹಾರ ಕೊಡುವುದನ್ನು ತಪ್ಪಿ ಸಿಕೊಳ್ಳುವುದಕ್ಕೋಸ್ಕರ ಸುಳ್ಳು ಸಾಧನೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

2 ನೇ ಹೆ.ಹಿ.ಸಿ.ನ್ಯಾ. ಮತ್ತು ಎಸಿಜೆಎಂ., ಉಡುಪಿ.